ಅದನ್ನು ತೆಗೆದುಕೊಳ್ಳುತ್ತೇವೆ. ನಾನು ಮತ್ತು ಮಾನ್ಯ ಶಿಕ್ಷಣ ಸಚಿವರು ಇವತ್ತು ಸಾಯಂಕಾಲ ಎಲ್ಲರನ್ನೂ ಕರೆದು ಮಾತನಾಡುತ್ತೇವೆ.ಮುಂದಿನ ವಿಚಾರವನ್ನು ನಾನು ಸದನಕ್ಕೆ ತಿಳಿಸುವವನಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರು...

ಅಧ್ಯಕ್ಷರು:– ಇದು ಶೂನ್ಯ ವೇಳೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಮುಂದಿನ ವಿಷಯವನ್ನು ಮಾನ್ಯ ಶ್ರೀಕಾಂತ್ ಕುಲಕರ್ಣಿಯವರು ಪ್ರಸ್ತಾಪಿಸಬೇಕು.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಜಲ್ಲಿ ಕ್ರಷರ್ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಪ್ರಸ್ತಾಪಿಸಬೇಕಾದ ಇನ್ನೊಂದು ವಿಷಯವಿದೆ.

ಅಧ್ಯಕ್ಷರು:– ಅದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

ವಿಷಯ: ರಾಜ್ಯದಲ್ಲಿ ಅರಿಶಿಣ ಬೆಳೆಗೆ ಬೆಂಬಲ ಬೆಲೆ ಘೋಷಿಸುವ ಕುರಿತು.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ):– ಮಾನ್ಯ ಅಧ್ಯಕ್ಷರೆ, ರೈತರಿಗೆ ಸಂಬಂಧಪಟ್ಟ ಒಂದು ಜ್ವಲಂತ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ಮತ್ತು ಸದನದ ಗಮನಕ್ಕೆ ತರಲಿಕ್ಕೆ ನಾನು ಬಯಸುತ್ತೇನೆ. ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಅರಿಶಿಣ ಬೆಳೆಯುವಂತಹ ರೈತರಿದ್ದಾರೆ....

ಅಧ್ಯಕ್ಷರು:– ಆಯಿತು, ತಾವು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಕೃಷಿ ಸಚಿವರು ಅದಕ್ಕೆ ಉತ್ತರ ಹೇಳಲಿ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಈ ಅರಿಶಿನ ಒಂದು anti-septic ಔಷಧಿಯ ಸಸ್ಯವಾಗಿರುವುದರಿಂದ ಇಡೀ ಜಗತ್ತಿನಲ್ಲಿ ಬೇಡಿಕೆ ಇದೆ. ಕಳೆದ ವರ್ಷ...

ಅಧ್ಯಕ್ಷರು:– ಆಯಿತು, ನೀವು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಸಚಿವರು ಉತ್ತರ ಹೇಳಲಿ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು:– ಉತ್ತರ ಹೇಳುವುದನ್ನು ಕೇಳಿ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಕಳೆದ ವರ್ಷ ಒಂದು ಕ್ವಿಂಟಾಲ್‌ಗೆ 18 ಸಾವಿರ ರೂ.ಗಳಿಗೆ ಮಾರಿದಂತಹ ಅರಿಶಿಣ ಈ ವರ್ಷ 3–4 ಸಾವಿರ ರೂ.ಗಳಿಗೆ ಕುಸಿದಿದೆ.

ಅಧ್ಯಕ್ಷರು:– ಅರಿಶಿಣಕ್ಕೆ ಬೆಂಬಲ ಬೆಲೆ ಬೇಕು ಎಂದು ಕೇಳಿದ್ದೀರಿ, ಅಷ್ಟೇ ತಾನೆ? ಶೂನ್ಯ ವೇಳೆಯಲ್ಲಿ ಅದರ ಬಗ್ಗೆ explanation ಬೇಡ. ಮಾನ್ಯ ಸಚಿವರು ಉತ್ತರ ನೀಡಲಿ.

ಶ್ರೀ ಶ್ರೀಕಾಂತ್ ಕುಲಕರ್ಣಿ:– ಸರ್ಕಾರ ವೈಜ್ಞಾನಿಕವಾಗಿ ಬೆಲೆಯನ್ನಾಗಿ ಘೋಷಣೆ ಮಾಡಿ, ಅರಿಶಿಣ ಬೆಳೆಯುವಂತಹ ರೈತರನ್ನು ಉಳಿಸುವಂತಹ ಪ್ರಯತ್ನ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಉಮೇಶ್ ವಿ.ಕತ್ತಿ (ಕೃಷಿ ಸಚಿವರು) (ಮಾನ್ಯ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅರಿಶಿಣವು ಒಂದು ವಾಣಿಜ್ಯ ಬೆಳೆಯಾಗಿರುತ್ತದೆ. 2011–12ನೇ ಸಾಲಿನಲ್ಲಿ 31,019 ಹೆಕ್ಟೇರ್ ವಿಸ್ತೀರ್ಣದಲ್ಲಿ 3,37,557 ಮೆಟ್ರಿಕ್ ಟನ್ ಗಳಷ್ಟು ಅರಿಶಿಣ ಉತ್ಪಾದಿಸುವ ಅಂದಾಜಿರುವುದಾಗಿ ತೋಟಗಾರಿಕಾ ಇಲಾಖೆಯು ಅಂಕಿ ಅಂಶ ನೀಡಿರುತ್ತಾರೆ, 2009–10ನೇ ಸಾಲಿನಲ್ಲಿ 15,626 ಹೆಕ್ಟೇರ್ ವಿಸ್ತೀರ್ಣದಲ್ಲಿ 95, 693 ಮೆಟ್ರಿಕ್ ಟನ್ ಅರಿಶಿಣ ಉತ್ಪಾದನೆಯಾದರೆ,2010–11ನೇ ಸಾಲಿನಲ್ಲಿ 15,939 ಹೆಕ್ಟೇರ್ ವಿಸ್ತೀರ್ಣದಲ್ಲಿ 97,607 ಮೆಟ್ರಿಕ್ ಟನ್ ಅರಿಶಿಣ ಉತ್ಪಾದನೆಯಾಗಿರುತ್ತದೆ. 2011–2012 ನೇ ಸಾಲಿನ ಉತ್ಪಾದನೆಯೋಂದಿಗೆ ಹೋಲಿಸಿದಾಗ 2009–10 ಹಾಗೂ 2010–11 ನೇ ಸಾಲಿಗಿಂತ ಶೇಕಡ 300 ರಷ್ಟು ಅಧಿಕ ಉತ್ಪಾದನೆಯಾಗಿರುತ್ತದೆ. 2011ರ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಪ್ರತಿ ಕ್ವಿಂಟಾಲ್ ಅರಿಶಿಣವು ರೂ. 8000/– ರಿಂದ ರೂ. 10,000/– ಗಳ ಬೆಲೆಯಲ್ಲಿ, 2011ರ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಪ್ರತಿ ಕ್ವಿಂಟಾಲ್ ಅರಿಶಿಣವು ರೂ. 5,300/– ರಿಂದ ರೂ. 6,500/–ಗಳ ಬೆಲೆಯಲ್ಲಿ ಹಾಗೂ 2011ರ ನವೆಂಬರ್ ಮತ್ತು ಡಿಸೆಂಬರ್ (03.12.2011)ರವರೆಗೆ ತಿಂಗಳಲ್ಲಿ ಪ್ರತಿ ಕ್ವಿಂಟಾಲ್ ರೂ. 3,200/–ರಿಂದ ರೂ. 5,000/–ಗಳ ಬೆಲೆಯಲ್ಲಿ ಮಾರಾಟವಾಗಿರುತ್ತದೆ. 2010ರ ಜುಲೈ ತಿಂಗಳಿನಿಂದ ಡಿಸೆಂಬರ್‌ವರೆಗೆ ಪ್ರತಿ ಕ್ವಿಂಟಾಲ್ ಅರಿಶಿಣವು ರೂ. 12,500/–ರಿಂದ 16,600/–ಗಳ ಬೆಲೆಯಲ್ಲಿ ಮಾರಾಟವಾಗಿರುತ್ತದೆ. ಹೆಚ್ಚಿನ ಉತ್ಪಾದನೆಯಿಂದಾಗಿ ಬೆಲೆ ಕುಸಿತಕ್ಕೊಳಗಾಗಿರುತ್ತದೆ. ಅರಿಶಿಣವು ಕೇಂದ್ರ ಸರ್ಕಾರವು ಘೋಷಿಸುವ ಕನಿಷ್ಠ ಬೆಂಬಲ ಬೆಲೆ ವ್ಯಾಪ್ತಿಯಲ್ಲಿ ಬಂದಿಲ್ಲವಾಗಿದ್ದು, ಪ್ರಸ್ತುತ ರಾಜ್ಯದಲ್ಲಿ

2010ರ ಅರಿಶಿಣ ಬೆಲೆಯೊಂದಿಗೆ ಹೋಲಿಸಿದಾಗ 2011ರಲ್ಲಿ ಕಡಿಮೆಯಾಗಿರುವುದರಿಂದ, ರಾಜ್ಯದ ಅರಿಶಿಣ ಬೆಳೆಗಾರರ ಹಿತದೃಷ್ಟಿಯಿಂದ ಮಾರುಕಟ್ಟೆ ಮಧ್ಯ ಪ್ರವೇಶ ಯೋಜನೆಯಡಿ ಅರಿಶಿಣವನ್ನು ಖರೀದಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕಾಗಿರುತ್ತದೆ. ಅರಿಶಿಣದ ಉತ್ಪಾದನಾ ವೆಚ್ಚವನ್ನಾಧರಿಸಿ ತೋಟಗಾರಿಕಾ ಇಲಾಖೆಯು ಎಫ್.ಎ.ಕ್ಯೂ. ಗುಣಮಟ್ಟದ ಅರಿಶಿಣಕ್ಕೆ ಪ್ರತಿ ಕ್ವಿಂಟಾಲ್ ಗೆ ರೂ. 3,500– ಬೆಂಬಲ ಬೆಲೆ ಶಿಫಾರಸ್ಸು ಮಾಡಿರುತ್ತದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಅರಿಶಿಣದ ಬೆಲೆಯು ರೂ. 3,200/–ರಿಂದ ರೂ. 5,000/– ಗಳ ತನಕ ಇದ್ದು, ಮುಂದಿನ ದಿನಗಳಲ್ಲಿ ಅರಿಶಿಣದ ಬೆಲೆ ಕುಸಿತಕ್ಕೊಳಗಾಗುವ ಸಾಧ್ಯತೆ ಇರುವುದರಿಂದ ಬೆಂಬಲ ಬೆಲೆ ಯೋಜನೆಯಡಿ ಅರಿಶಿಣವನ್ನು ಖರೀದಿಸಲು ಸರ್ಕಾರದಿಂದ ಕ್ರಮವನ್ನು ಜರುಗಿಸಲಾಗುವುದು.

ಅಧ್ಯಕ್ಷರು:– ಮಾನ್ಯ ಅಭಯ ಪಾಟೀಲ್, ಮಾನ್ಯ ವೆಂಕಟರಾವ್ ನಾಡಗೌಡ ಮತ್ತು ಮಾನ್ಯ ಬಿ.ಸಿ.ಪಾಟೀಲ್ ಎಲ್ಲರೂ ಸೇರಿ ವಿಷಯವೊಂದನ್ನು ಪ್ರಸ್ತಾಪಿಸಲು ಅನುಮತಿ ಕೇಳಿದ್ದೀರಿ, ಮಾತನಾಡಿ.

ವಿಷಯ:– ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಉದ್ಯಮಗಳ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರದ ಅಧಿಕಾರಿಗಳು ಜಾರಿಗೆ ತರದಿರುವ ಬಗ್ಗೆ.

ಶ್ರೀ ವೆಂಕಟರಾವ್ ನಾಡಗೌಡ (ಸಿಂಧನೂರು):– ಮಾನ್ಯ ಅಧ್ಯಕ್ಷರೆ, ತಾವೇನು ಸದನದ ಸಮಿತಿಗಳನ್ನು ನೇಮಕ ಮಾಡಿದ್ದೀರಿ, ಆ ಸಮಿತಿಗಳಿಗೆ ಗೌರವಾನ್ವಿತ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಬರುವುದೂ ಇಲ್ಲ, ಹಾಜರಾತಿಯೂ ಇರುವುದಿಲ್ಲ. ಅಲ್ಲಿ ಬರುವಾಗ ಪೂರ್ಣ ತಯಾರಿಯೊಂದಿಗೆ ಬಂದಿರುವುದಿಲ್ಲ. ಸಮಿತಿಗೆ ಸಮರ್ಪಕವಾದ ಉತ್ತರಗಳನ್ನು ಕೊಡುವುದಿಲ್ಲ. ನಾಲ್ಕು ನಾಲ್ಕು ವರ್ಷ ಸಮಯ ಕೊಟ್ಟರೂ ಕೂಡ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಒಂದೊಂದು ಸಲ ಎಂತಹ ಕೆಲಸಗಳನ್ನು ಮಾಡುತ್ತಾರೆ ಎಂದರೆ, ಒಂದು ಸದನ ಸಮಿತಿ ಶಿಫಾರಸ್ಸು ಮಾಡಿ, ಅದು ಸದನದಲ್ಲಿ ಮಂಡನೆಯಾದ ಮೇಲೆ, ಸಮಿತಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದರೆ, ಅದರ ಮೇಲೆ ಮತ್ತೊಂದು ಸಮಿತಿಗಳನ್ನು ನೇಮಕ ಮಾಡುವುದು, enquiry ciommittee ನೇಮಕ ಮಾಡುವುದು ಮುಂತಾದ ಕ್ರಮಗಳ ಮೂಲಕ ತಪ್ಪಿತಸ್ಥ ಅಧಿಕಾರಿಗಳನ್ನು ಉಳಿಸುವುದಕ್ಕೆ ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತಿದ್ದಾರೆ. ಇದರಿಂದಾಗಿ ನಾವು ಸಮಿತಿಯಲ್ಲಿ ಏನೇ ತೀರ್ಮಾನಗಳನ್ನು ತೆಗೆದುಕೊಂಡರೂ